INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July--August, 2025
PageNo,26-32
Peer -Reviewed, Refereed Journal

# ಹೊನ್ನಾವರ ಗ್ರಾಮದ ಕೇಶವ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ ಕುರಿತ ವಿಶ್ಲೇಷಣೆ

**ಡಾ.ಬಿ.ಸಿ.ಸುರೇಶ.** [1]

**ಭಾ**ರತದ ಸಂಸ್ಕೃತಿಯ ಕಲೆ ಮತ್ತು ವಾಸ್ತುಶಿಲ್ಪವು ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ. ಕಲೆಯು ಒಂದು ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಲ್ಲದೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಚಟುವಟಿಕೆಯನ್ನು ರೂಪಿಸುವುದರಲ್ಲಿ ಪ್ರಾಚೀನ ಕಾಲದಿಂದಲೂ ಮಹತ್ವವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಕಲೆ ಮತ್ತು ವಾಸ್ತುಶಿಲ್ಪಗಳು ಆಯಾ ಕಾಲಘಟ್ಟದ ಇತಿಹಾಸವನ್ನು ಗುರುತಿಸುವಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಉತ್ತಮವಾದ ವಾಸ್ತುಶೈಲಿಯ ಮೂಲಕ ದೀರ್ಘಕಾಲದವರೆಗೆ ನಿಲ್ಲುವ ದೇವಾಲಯಗಳ ಚರಿತ್ರೆಯ ವಿವಿಧ ಯುಗಗಳಲ್ಲಿ ಪ್ರಚಲಿತವಾಗಿದ್ದ ಧರ್ಮದ ವಿವಿಧ ಛಾಯೆಗಳನ್ನು ಬೇಧಗಳನ್ನು, ಪ್ರಧಾನತೆಗಳನ್ನು, ಪ್ರಾಂತಿಯ ಮನೋಧರ್ಮಗಳನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತದೆ. ಇಷ್ಟೇ ಅಲ್ಲದೆ ಜನರ ಅಭಿರುಚಿ, ಧರ್ಮದಲ್ಲಿ ನಂಬಿಕೆ ಸಾಮಾಜಿಕ ಸಂಪ್ರದಾಯಗಳು, ನಂಬಿಕೆಗಳು ಮೊದಲಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.

ಭಾರತದ ಸಂಸ್ಕೃತಿಯ ಪರಂಪರೆಗೆ ಕಲೆ ಮತ್ತು ವಾಸ್ತುಶಿಲ್ಪವು ದೇವಸ್ಥಾನಗಳ ಮೂಲಕ ಇಂದಿಗೂ ಉಳಿದುಬಂದಿವೆ. ಚರಿತ್ರೆಯ ಕಾಲಾನುಕ್ರಮದಲ್ಲಿ ರಾಜಮನೆತನಗಳ ಶ್ರೀಮಂತಿಕೆಯ ಪ್ರತಿಬಿಂಬದಂತೆ ಕಲೆ ಬೆಳೆದುಬಂದಿದೆ. ಅರಸರ ಔದಾರ್ಯ, ಶ್ರೀಮಂತರ ಉದಾರ, ಕೆಲಸಗಾರರ ಕುಶಲತೆ, ಊರಿನವರ ಸಂಪತ್ತು ಇವನ್ನೆಲ್ಲಾ ಅವಲಂಬಿಸಿ ದೇವಾಲಯಗಳು ನಿರ್ಮಿತವಾದರೆ, ಜನರ ಧಾರ್ಮಿಕ ಶ್ರದ್ಧೆ, ನಂಬಿಕೆ, ಪರಂಪರಾನುಗತ ಆಚರಣೆಗಳ ಮೂಲಕ ದೇವಾಲಯಗಳು ಬೆಳವಣಿಗೆ ಹೊಂದುತ್ತವೆ. ಆದರೂ ಈ ಎರಡು ರೀತಿಯ ಆಲಯಗಳಿಗೂ ನಂಬಿಕೆ, ಸಂಪ್ರದಾಯಗಳೇ ಬುನಾದಿ ಎನ್ನುವುದು ಗಮನಾರ್ಹ ವಿಷಯ. ದೇವಾಲಯಗಳು ಧಾರ್ಮಿಕ ಕೇಂದ್ರವಾಗುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ವಿಕಾಸಕ್ಕೂ ಸಹಾಯವಾಗುತ್ತವೆ.

ಸ್ಥಳಿಯರಿಗೆ ನ್ಯಾಯ ದೊರಕಿಸಿ ಕೊಡುವಾಗ ನ್ಯಾಯಾಲಯವಾಗಿ, ಸಾಮೂಹಿಕ ಸಮಸ್ಯೆಗಳನ್ನು ಚರ್ಚಿಸುವಾಗ ವೈಚಾರಿಕ ಕೇಂದ್ರವಾಗಿ, ವಿವಾಹ ಮತ್ತಿತರ ಮಂಗಳ ಕಾರ್ಯಗಳಿಗೆ ಕಲ್ಯಾಣ ಮಂಟಪವಾಗಿ, ನೃತ್ಯ-ಸಂಗೀತಗಳಿಗೆ ಮನರಂಜನೆಯ ವೇದಿಕೆಯಾಗಿ, ತಾತ್ವಿಕ ವಿಚಾರ ವಿನಿಮಯಗಳಿಗೆ

---

[1]. ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ, ಶ್ರೀ.ಡಿ,ದೇವರಾಜ ಅರಸು ಸರ್ಕಾರಿ,ಪ್ರಥಮ,ದರ್ಜೆ,ಕಾಲೇಜು,ಹುಣಸೂರು.

ಮತ್ತು ಧಾರ್ಮಿಕ ಜಿಜ್ಞಾಸೆಗಳಿಗೆ ಬೋಧನ ಶಾಲೆಯಾಗಿ ಉಪಯೋಗವಾಗಿವೆ. ಈ ರೀತಿಯ ಆತ್ಮೀಯ ಒಡನಾಟದಿಂದ ಜನರ ಆಲಯದ ಸಂಬಂಧ ಗಟ್ಟಿಗೊಳ್ಳುತ್ತದೆ. ಹೀಗೆ ಜನಸಂಸ್ಕೃತಿಯಲ್ಲಿ ಸ್ಥಾನವನ್ನು ಪಡೆದುಕೊಂಡ ದೇವಾಲಯಗಳನ್ನು ಕುರಿತು ಇದುವರೆಗೆ ಸಾಕಷ್ಟು ಅಧ್ಯಯನಗಳು ಮತ್ತು ದೇವಾಲಯಗಳನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಪ್ರಯತ್ನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಹೊನ್ನಾವರ ಕೇಶವ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ತಳಸ್ಪರ್ಶಿ ಅಧ್ಯಯನ ಮಾಡಲಾಗಿದೆ.

ಹೊನ್ನಾವರ ಗ್ರಾಮವು ಹಾಸನ ನಗರದಿಂದ ಈಶಾನ್ಯ ದಿಕ್ಕಿಗೆ 20 ಕಿ.ಮೀ. ಅಂತರದಲ್ಲಿ ಕಂಡು ಬರುತ್ತದೆ. ಪ್ರಾಚೀನವಾಗಿ ಈ ಗ್ರಾಮವು ಕಬ್ಬಿಣ ಯುಗದ ನೆಲೆಯಾಗಿತ್ತೆಂಬುದು ತಿಳಿದುಬರುತ್ತದೆ. ಈ ಗ್ರಾಮದಲ್ಲಿ ಒಟ್ಟು 6 ಶಾಸನಗಳು ಮತ್ತು ಕೇಶ, ಈಶ್ವರ, ಆಂಜನೇಯ, ಕೋಡಮ್ಮ, ವೀರಭದ್ರ, ಚಿಕ್ಕಮ್ಮ, ಬೀರಿದೇವ ಎಂಬ ಏಳು ದೇವಾಲಯಗಳು ಕಂಡುಬಂದಿದ್ದು, ಇವುಗಳಲ್ಲಿ ಕೇಶವ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಸುಂದರ ದೇವಾಲಯವಾಗಿದೆ. ಈ ಗ್ರಾಮವು ಪ್ರಾಚೀನ ಕಾಲದಲ್ಲಿ ನೀರ್ಗುಂದ ನಾಡಿಗೆ ಸೇರಿದ ಒಂದು ಪ್ರಮುಖ ಅಗ್ರಹಾರವೂ ಆಗಿತ್ತೆಂಬುದು ಇಲ್ಲಿನ ಶಾಸನಗಳಿಂದ ದೃಢಪಟ್ಟಿರುತ್ತದೆ.

**ಕೇಶವ ದೇವಾಲಯ:** ಇದು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಕಂಡುಬರುತ್ತದೆ. ಈ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ ಕೋಣೆಯ ಶಂಕರದಂಡನಾಥ ಎಂಬಾತನು ಕ್ರಿ.ಶ.1149ರಲ್ಲಿ ನಿರ್ಮಿಸಿದನೆಂದು ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಈ ದೇವಾಲಯವು ಆಗಮಶಾಸ್ತ್ರದ ಮಂತ್ರ ಸಿದ್ಧಾಂತದ ನಿಯಮಗಳನ್ನು ಅನುಸರಿಸಿ ನಿರ್ಮಣವಾಗಿದೆ. ಮಂತ್ರ ಸಿದ್ಧಾಂತ ಎಂದರೆ; ಕೇವಲ ಒಂದೇ ದೇವತೆಯನ್ನು ಬಿಟ್ಟು ಇತರ ಪಂಥದ ದೇವತೆಗಳನ್ನು, ಪರಿವಾರ ದೇವತೆಗಳನ್ನು ಆರಾಧಿಸುವಂತಿಲ್ಲ. ಹಾಗಾಗಿ ಬೇರೆ ಹೊಯ್ಸಳ ದೇವಾಲಯಗಳಲ್ಲಿ ಕಂಡುಬರುವಂತೆ ಈ ದೇವಾಲಯದಲ್ಲಿ ಗಣಪತಿ, ಸೂರ್ಯ, ಭೈರವ, ಸಪ್ತಮಾತೃಕೆಯರು ಇನ್ನಿತರ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಆದ್ದರಿಂದ ಇದನ್ನು ಆಗಮೋಕ್ತ ಮಂತ್ರ ಸಿದ್ಧಾಂತದ ದೇವಾಲಯ ಎಂದು ಕರೆಯಬಹುದು. ಈ ದೇವಾಲಯವು ಏಕಕೂಟವಾಗಿದ್ದು ಗರ್ಭಗೃಹ, ತೆರೆದ ಸುಖನಾಸಿ, ನವರಂಗ ಮತ್ತು ಮುಖಮಂಟಪದ ಭಾಗಗಳನ್ನು ಒಳಗೊಂಡಿದ್ದು ಕೆಂಪು ಮಿಶ್ರಿತ ಕಣಶಿಲೆಯಿಂದ ನಿರ್ಮಾಣವಾಗಿದೆ.

**ಗರ್ಭಗೃಹ:** ಈ ಗರ್ಭಗೃಹವು 8X8 ಅಡಿ ವಿಸ್ತೀರ್ಣವನ್ನು ಹೊಂದಿದ್ದು, ಇದರ ಮಧ್ಯಭಾಗದಲ್ಲಿ 1.6 ಅಡಿ ಎತ್ತರದ ಗರುಡ ಪೀಠದ ಮೇಲೆ 6 ಅಡಿ ಎತ್ತರದ ಕೇಶವನ ವಿಗ್ರಹವಿದೆ. ಬಲಹಿಂಬದಿಯ ಕೈಯಲ್ಲಿ ಶಂಖ, ಎಡ ಹಿಂಬದಿಯ ಕೈಯಲ್ಲಿ ಚಕ್ರ, ಎಡ ಮುಂಬದಿಯ ಕೈಯಲ್ಲಿ ಗದಾ ಮತ್ತು ಬಲ

ಮುಂಬದಿಯ ಕೈಯಲ್ಲಿ ಪದ್ಮವನ್ನು ಹಿಡಿದಿರುವ ಕೇಶವನು ಕಂಠೀಹಾರ, ಹಾರ, ಕೇಯೂರ, ಉದರಬಂಧ, ಕಂಕಣ, ರತಾಂಗುಲೀಕಯಕಗಳು, ಯಜ್ಞೋಪವೀತ ಮತ್ತು ವನಮಾಲೆಯನ್ನು ಧರಿಸಿದ್ದು, ಎರಡೂ ಪಾರ್ಶ್ವದಲ್ಲಿ ಭೂದೇವಿ–ಶ್ರೀದೇವಿ ಸಮೇತನಾಗಿ ಸ್ಥಾನಕ ಮೂರ್ತಿಯಾಗಿದ್ದಾನೆ. ಶಿಲ್ಪದ ಹಿಂಭಾಗದಲ್ಲಿ ಸುಂದರವಾದ ಪ್ರಭಾವಳಿಯಿದ್ದು ಇದರಲ್ಲಿ ವಿಷ್ಣುವಿನ ದಶಾವತಾರದ ಶಿಲ್ಪಗಳನ್ನು ಮೂಡಿಸಲಾಗಿದೆ. ಗರ್ಭಗುಡಿಯ ದ್ವಾರವು ವಜ್ರ, ವಲ್ಲೀ, ಸ್ತಂಭ ಮತ್ತು ವಲ್ಲೀ ಎಂಬ ಚರ್ತುಶಾಖೆಗಳನ್ನು ಹೊಂದಿದ್ದು, ದ್ವಾರಬಂಧದ ಲಲಾಟಬಿಂಬದಲ್ಲಿ ಗಜಲಕ್ಮಿಯ ಶಿಲ್ಪವಿದೆ. ದ್ವಾರದ ಎರಡೂ ಪಾರ್ಶ್ವದಲ್ಲಿ ವೈಷ್ಣವ ದ್ವಾರಪಾಲಕರಾದ ಜಯ–ವಿಜಯರು ಸರ್ವಾಭರಣ ಭೂಷಿತರಾಗಿ ಶಂಖ, ಚಕ್ರ ಮತ್ತು ಗದೆಯನ್ನು ಹಿಡಿದು ದ್ವಿಭಂಗಿಯಲ್ಲಿ ನಿಂತಿದ್ದಾರೆ.

**ಸುಖನಾಸಿ:** ಈ ದೇವಾಲಯವು ತೆರೆದ ಸುಖನಾಸಿಯನ್ನು ಹೊಂದಿದ್ದು, ದ್ವಾರವು ಕಂಡು ಬರುವುದಿಲ್ಲ. ಇದರ ಭುವನೇಶ್ವರಿಯು ಆಕರ್ಷಕವಾಗಿದ್ದು, ಮೊದಲು ಚತುರಶ್ರವಾಗಿರುವ ಈ ಮೌನವು ಅನಂತರ ಅಷ್ಟಕೋನಗಳನ್ನು ಹೊಂದಿ ಮಧ್ಯಭಾಗದಲ್ಲಿ ಚತುರಶ್ರವಾದ ಶಿಲಾಫಲಕವನ್ನು ಹೊಂದಿದೆ. ಈ ಶಿಲಾಫಲಕದಲ್ಲಿ ಆಯಾ ದಿಕ್ಕಿಗಳಿಗನುಸಾರವಾಗಿ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಈ ವಿತಾನದ ಪಾರ್ಶ್ವಭಾಗದ ದಿಂಡುಗಳಲ್ಲಿ ವಾದ್ಯಗಾರರು, ನೃತ್ಯಗಾರರ ಶಿಲ್ಪಗಳನ್ನು ಕೆತ್ತಲಾಗಿದ್ದು, ಜೊತೆಗೆ ಕೀರ್ತಿಮುಖಗಳ ಅಲಂಕರಣೆಯೂ ಕಂಡುಬರುತ್ತದೆ.

**ನವರಂಗ:** ನವರಂಗವು 20X22 ಅಡಿ ಉದ್ದ ಅಗಲವನ್ನು ಹೊಂದಿದ್ದು, ಇದರಲ್ಲಿ ನಾಲ್ಕು ಶ್ರೀಕಾರ ಸ್ತಂಭಗಳು ಕಂಡುಬರುತ್ತವೆ. ಈ ಸ್ತಂಭಗಳು ಪೀಠ, ನಾಲ್ಕು ಕೋನದ ದಿಂಡು, ವೃತ್ತಾಕಾರದ ಬಳೆಗಳು ಮತ್ತು ಘಂಟಾಕಾರವನ್ನು ಹೊಂದಿರುವ ಶಲಾಕ, ಕಂಠ, ಚತುರಶ್ರ ಫಲಕ ಮತ್ತು ಮುಷ್ಠಿಬಂಧ ಪೋತಿಕೆಯನ್ನು ಹೊಂದಿವೆ. ಸ್ತಂಭದ ಘಂಟಾಕಾರದ ಭಾಗ ಮತ್ತು ಕಂಠ ಭಾಗದ ಮೇಲೆ ಸೂಕ್ಷ್ಮವಾದ ಮಣಿಮಾಲೆಗಳ ಕೆತ್ತನೆಯನ್ನು ಗುರುತಿಸಬಹುದು. ಭಿತ್ತಿಯಲ್ಲಿ ಗೋಡೆಗೆ ಹೊಂದಿಕೊಂಡಂತೆ ವರ್ಧಮಾನ ಸ್ತಂಭಗಳು ಕಂಡು ಬರುತ್ತವೆ. ನವರಂಗವು 9 ಭುವನೇಶ್ವರಿಗಳನ್ನು ಒಳಗೊಂಡಿದ್ದು, ಮಧ್ಯ ಅಂಕಣದ ಭುವನೇಶ್ವರಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಭುವನೇಶ್ವರಿಗಳು ಸರಳ ಪದ್ಮದ ರಚನೆಯಿರುವ ನಾಭಿಚ್ಛಂಧ ಮಾದರಿಯಿಂದ ಕೂಡಿವೆ. ಮಧ್ಯ ಅಂಕಣದ ಭುವನೇಶ್ವರಿಯ ಪಾರ್ಶ್ವ ದಿಂಡುಗಳು ಅಷ್ಟಕೋನವನ್ನು ಹೊಂದಿದ್ದು ಇವುಗಳ ಮಧ್ಯಭಾಗದಲ್ಲಿ ಚತುರಶ್ರವಾದ ಶಿಲಾಫಲಕವಿದೆ. ಈ ಶಿಲಾಫಲಕದ ಮಧ್ಯಭಾಗದಲ್ಲಿ ಬ್ರಹ್ಮನ ಸುತ್ತಲೂ ಯಕ್ಷರು ಹಾರವನ್ನು ಹಿಡಿದು ಜಿಗಿಯುತ್ತಿರುವಂತೆ ಚಿತ್ರಿಸಲಾಗಿದೆ. ಹಾಗೂ ಭುವನೇಶ್ವರಿಯಲ್ಲಿ ಕೀರ್ತಿಮುಖಗಳ ಅಲಂಕರಣವೂ ಕಂಡುಬರುತ್ತದೆ. ನವರಂಗವು ಆಕರ್ಷಕವಾದ ಪಂಚಶಾಖಾಬಂಧವನ್ನು ಹೊಂದಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ

ಶಿಲ್ಪವನ್ನು ಖಂಡರಿಸಲಾಗಿದೆ. ದ್ವಾರದ ಎರಡೂ ಪಾರ್ಶ್ವದಲ್ಲಿ ದ್ವಿಭಂಗಿಯಲ್ಲಿ ನಿಂತಿರುವ ವೈಷ್ಣವ ದ್ವಾರಪಾಲಕರಾದ ಜಯ–ವಿಜಯರ ಶಿಲ್ಪಗಳಿವೆ.

**ಮುಖಮಂಟಪ:** ಮುಖಮಂಟಪವು ಶ್ರೀಕಾರ ಮಾದರಿಯ ಎರಡು ಅರ್ಧ ಸ್ತಂಭಗಳನ್ನು ಮತ್ತು ಇತ್ತೀಚೆಗೆ ನವೀನವಾಗಿ ನಿರ್ಮಿಸಿರುವ ಕಕ್ಷಾಸನಗಳನ್ನು ಹೊಂದಿದ್ದು ಸರಳವಾಗಿದೆ. ಸ್ತಂಭಗಳು ಘಂಟಾಕಾರದ ಶಲಾಕ ಭಾಗದಿಂದ ಮೇಲೆ ಕಂಡುಬರುವ ಅಂಗಗಳನ್ನು ಮಾತ್ರ ಹೊಂದಿವೆ. ಈ ಮುಖಮಂಟಪದ ಅಧಿಷ್ಠಾನಕ್ಕೆ ಹೊಂದಿಕೊಂಡಂತೆ ಈ ದೇವಾಲಯದ ನಿರ್ಮಾಣವನ್ನು ತಿಳಿಸುವ ಶಾಸನ ಕಲ್ಲನ್ನು ನಿಲ್ಲಿಸಲಾಗಿದೆ.

**ಅಧಿಷ್ಠಾನ:** ಈ ದೇವಾಲಯದ ಅಧಿಷ್ಠಾನವು 4 ಅಡಿ ಎತ್ತರವನ್ನು ಹೊಂದಿದ್ದು, ಇದರಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟ ಕುಮುದ, ಗಳ, ದಂತ ಪಂಕ್ತಿ, ಆಲಿಂಗ ಮತ್ತು ಪ್ರತೀ ಭಾಗಗಳು ಕಂಡುಬಂದಿದ್ದು, ಇದನ್ನು ಪ್ರತಿಬಂಧ ಅಧಿಷ್ಠಾನ ಎಂದು ಕರೆಯಲಾಗಿದೆ.

**ಭಿತ್ತಿ ಮತ್ತು ಪ್ರಸ್ತರ:** ಈ ದೇವಾಲಯದ ಭಿತ್ತಿಯ ಪ್ರಮುಖವಾದ ಆಕರ್ಷಣೀಯ ಭಾಗವಾಗಿದ್ದು ಇದರಲ್ಲಿ ಕೋಷ್ಠಗಳು, ಸ್ತಂಭ ಪಂಜರಗಳು, ಬ್ರಹ್ಮಕಾಂತ ಭಿತ್ತಿಪಾದಗಳು, ಬಳ್ಳಿ ಸುರುಳಿಗಳು ಮತ್ತು ವೈಷ್ಣವ ಪರಂಪರೆಯನ್ನು ಬಿಂಬಿಸುವ ಶಿಲ್ಪಗಳನ್ನು ಹಾಗೂ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ಕೆಲವು ಮುಖ್ಯ ದೇವತಾ ಶಿಲ್ಪಗಳಿರುವ ಕೋಷ್ಠಗಳ ಮೇಲೆ ವಿವಿಧ ಶಿಖರದ ಮಾದರಿಗಳನ್ನು ನಿರ್ಮಿಸಿದ್ದಾರೆ. ಕೆಲವು ಶಿಲ್ಪಗಳ ಮೇಲೆ ಸ್ತಂಭ ಪಂಜರಗಳನ್ನು ಮತ್ತು ಸುರುಳಿ ಬಳ್ಳಿಗಳನ್ನು ಕೆತ್ತಿರುವುದನ್ನು ನೋಡಬಹುದು. ಭಿತ್ತಿಯಲ್ಲಿ ಕಂಡುಬರುವ ಶಿಲ್ಪಗಳು ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದ್ದು ಅವುಗಳಲ್ಲಿ ಪ್ರಮುಖವಾದ ಭಿತ್ತಿ ಶಿಲ್ಪಗಳನ್ನು ಈ ಕೆಳಕಂಡಂತೆ ಹೆಸರಿಸಲಾಗಿದೆ.

**ಕೇಶವ:** ಈ ಶಿಲ್ಪವು ದೇವಾಲಯದ ಆಗ್ನೇಯ ಭಿತ್ತಿಯಲ್ಲಿ ಕಂಡು ಬಂದಿದ್ದು ಶಂಖ, ಚಕ್ರ, ಗದಾ ಮತ್ತು ಪದ್ಮವನ್ನು ಹಿಡಿದಿದ್ದು ಸಮಭಂಗಿಯಲ್ಲಿ ನಿಂತಿದೆ. ಹಾರ, ಕಂಠೀಹಾರ, ಉಡ್ಯಾಣ, ಕಂಕಣ, ಕೇಯೂರ ಮತ್ತು ವನಮಾಲೆಯನ್ನು ಧರಿಸಿರುವ ಈ ಶಿಲ್ಪದ ಮುಖವು ಭಗ್ನವಾಗಿದೆ.

**ಮನ್ಮಥ:** ದ್ವಿಭಂಗಿಯಲ್ಲಿರುವ ಈ ಶಿಲ್ಪವು ದಕ್ಷಿಣ ಭಿತ್ತಿಯಲ್ಲಿ ಕಂಡು ಬಂದಿದ್ದು, ಮನ್ಮಥನು ಬಿಲ್ಲು ಮತ್ತು ಹೂಬಾಣವನ್ನು ಹಿಡಿದು ಸರ್ವಾಭರಣಗಳಿಂದ ಅಲಂಕರಿಸಲ್ಪಟ್ಟಿದ್ದಾನೆ.

**ಲಕ್ಷ್ಮೀನಾರಾಯಣ:** ಈ ಶಿಲ್ಪವು ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಕಂಡುಬಂದಿದ್ದು ಇದರ ಮೇಲೆ ಎರಡು ತಲಗಳನ್ನು ಹೊಂದಿರುವ ದ್ರಾವಿಡ ಶೈಲಿಯ ಶಿಖರದ ಮಾದರಿಯನ್ನು ನಿರ್ಮಿಸಲಾಗಿದೆ. ಈ ಶಿಲ್ಪದಲ್ಲಿ ಸರ್ವಾಭರಣಗಳನ್ನು ಧರಿಸಿರುವ ಲಕ್ಷ್ಮೀಯು ನಾರಾಯಣದ ಎಡತೊಡೆಯ ಮೇಲೆ ಸುಖಾಸನದಲ್ಲಿ ಕುಳಿತಿದ್ದು ಎಡಗೈನಲ್ಲಿ ಕಳಸವನ್ನು ಹಿಡಿದು ಚಿನ್ಮುದ್ರೆಯನ್ನು ಹೊಂದಿದ್ದಾಳೆ. ನಾರಾಯಣನು ಕೂಡ ಸುಖಾಸನದಲ್ಲಿ ಕುಳಿತಿದ್ದು ಬಲಪಾರ್ಶ್ವದ ಕೈಗಳಲ್ಲಿ ಶಂಖ ಮತ್ತು ಪದ್ಮವನ್ನು ಎಡ

ಹಿಂಬದಿಯ ಕೈಯಲ್ಲಿ ಚಕ್ರ ಮತ್ತು ಮುಂಬಿದಯ ಕೈಯನ್ನು ಲಕ್ಷ್ಮಿಯ ಭುಜದ ಮೇಲೆ ಹಾಕಿದ್ದಾನೆ. ಲಕ್ಷ್ಮಿಯ ಎಡ ಪಾರ್ಶ್ವದಲ್ಲಿ ಮಂಡಿಯೂರು ಕುಳಿತಿರುವ ಗರುಡ ಶಿಲ್ಪವಿದೆ.

**ಮೋಹಿನಿ ಶಿಲ್ಪ:** ಇದು ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಕಂಡು ಬರುವ ಶಿಲ್ಪವಾಗಿದ್ದು, ಇದರಲ್ಲಿ ಮೋಹಿನಿಯು ತ್ರಿಭಂಗಿಯಲ್ಲಿ ನಗ್ನವಾಗಿ ನಿಂತಿದ್ದು, ಶಿಲ್ಪದ ಮೇಲ್ಭಾಗದಲ್ಲಿ ಸುರುಳಿ ಬಳ್ಳಿಯ ಕೆತ್ತನೆಯಿದೆ.

**ಕೇಶವ:** ಶಂಖ, ಪದ್ಮ ಮತ್ತು ಗದೆಯನ್ನು ಹಿಡಿದಿರುವ ಈ ಶಿಲ್ಪದ ಎಡ ಮೇಲ್ಭಾಗದ ಕೈ ಭಗ್ನವಾಗಿದೆ. ಸ್ಥಾನಕ ಮೂರ್ತಿಯಾಗಿರುವ ಕೇಶವನು ಸರ್ವಾಭರಣಗಳಿಂದ ಭೂಷಿತನಾಗಿದ್ದು ಈತನ ಎರಡೂ ಪಾರ್ಶ್ವದಲ್ಲಿ ಇಬ್ಬರು ಪರಿಚಾರಕಿಯರಿದ್ದಾರೆ. ಕೇಶವನ ಶಿಲ್ಪವಿರುವ ಈ ಕೋಷ್ಠದ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ಶಿಖರದ ಮಾದರಿಯನ್ನು ನಿರ್ಮಿಸಿದ್ದಾರೆ.

**ಜನಾರ್ಧನ:** ಈ ಶಿಲ್ಪವು ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಕಂಡು ಬಂದಿದ್ದು ಈ ಶಿಲ್ಪದ ಮೇಲೆ ದ್ರಾವಿಡ ಶೈಲಿಯ ಶಿಖರದ ಮಾದರಿಯಿದೆ. ದ್ವಿಭಂಗಿಯಲ್ಲಿ ನಿಂತಿರುವ ಜನಾರ್ಧನನು ಬಲ ಹಿಂದಿನ ಕೈಯಲ್ಲಿ ಚಕ್ರ, ಮುಂದಿನ ಕೈಯಲ್ಲಿ ಪದ್ಮ, ಎಡ ಹಿಂದಿನ ಕೈಯಲ್ಲಿ ಶಂಖ ಮತ್ತು ಮುಂದಿನ ಕೈಯಲ್ಲಿ ಗದೆಯನ್ನು ಹಿಡಿದಿದ್ದು ಸರ್ವಾಭರಣಗಳನ್ನು ಧರಿಸಿದ್ದಾನೆ.

**ಉಗ್ರನರಸಿಂಹ:** ಈ ಶಿಲ್ಪವು ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಕಂಡುಬಂದಿದ್ದು ಉಗ್ರನರಸಿಂಹನು ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆದು ಕರುಳನ್ನು ಹಾರ ಮಾಡಿಕೊಂಡಿರುವಂತೆ ಸುಂದರವಾಗಿ ಶಿಲ್ಪವನ್ನು ಕೆತ್ತಿದ್ದು, ಇದರಲ್ಲಿ ನರಸಿಂಹನು ಅಷ್ಟಭುಜಗಳನ್ನು ಹೊಂದಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ದ್ರಾವಿಡ ಶಿಖರದ ಮಾದರಿಯನ್ನು ನಿರ್ಮಿಸಲಾಗಿದೆ.

**ಧರಣಿವರಾಹ:** ಈ ಶಿಲ್ಪವು ಪಶ್ಚಿಮ ದಿಕ್ಕಿನ ಗರ್ಭಗುಡಿಯ ಭಿತ್ತಿಯಲ್ಲಿ ಕಂಡುಬರುತ್ತದೆ. ಇದರಲ್ಲಿ ವಿಷ್ಣುವು ವರಾಹವತಾರವನ್ನು ಎತ್ತಿ ಭೂದೇವಿಯನ್ನು ರಕ್ಷಿಸಿ ತನ್ನ ಎಡ ಭುಜದ ಮೇಲೆ ಕೂರಿಸಿಕೊಂಡಿರುವಂತೆ ಈ ಶಿಲ್ಪವನ್ನು ಕೆತ್ತಲಾಗಿದ್ದು ಈ ಶಿಲ್ಪದ ಮೇಲೆ 3 ತಲಗಳನ್ನು ಹೊಂದಿರುವ ದ್ರಾವಿಡ ಮಾದರಿಯ ಶಿಖರವನ್ನು ನಿರ್ಮಿಸಿದ್ದಾರೆ.

**ವಾಮನ:** ಈ ಶಿಲ್ಪವು ಕುಬ್ಜವಾಗಿದ್ದು, ಇದರ ಎರಡೂ ಕೈಗಳು ಭಗ್ನವಾಗಿವೆ ಹಾಗೂ ಶಿಲ್ಪದ ಎರಡೂ ಬದಿಯಲ್ಲಿ ಚಾಮರಧಾರಿಣಿಯರಿದ್ದಾರೆ.

**ಸಂಕರ್ಷಣ:** ಚತುರ್ವಿಂಶತಿ ಮೂರ್ತಿಗಳಲ್ಲಿ ಇದು ಸಹ ಒಂದು. ಇದರಲ್ಲಿ ಶಿಲ್ಪವು ಬಲ ಹಿಂಭಾಗದ ಕೈಯಲ್ಲಿ ಶಂಖ, ಮುಂಭಾಗದ ಕೈಯಲ್ಲಿ ಗದೆ, ಎಡ ಹಿಂಭಾಗದ ಕೈಯಲ್ಲಿ ಚಕ್ರವನ್ನು ಹಿಡಿದಿದ್ದು ಸ್ಥಾನಕ ಮೂರ್ತಿಯಾಗಿದೆ.

**ವೇಣುಗೋಪಾಲ:** ಇದರಲ್ಲಿ ಕೃಷ್ಣನು ಕೊಳಲನ್ನು ನುಡಿಸುತ್ತಾ ತ್ರಿಭಂಗಿಯಲ್ಲಿ ನಿಂತಿದ್ದು, ಗೋವುಗಳು ಈ ಸಂಗೀತವನ್ನು ಆಲಿಸುತ್ತಿರುವಂತೆ ಶಿಲ್ಪದಲ್ಲಿ ಪಡೆಮೂಡಿಸಲಾಗಿದೆ.

**ಗೋವರ್ಧನ ಗಿರಿಧಾರಿ:** ಉತ್ತರ ದಿಕ್ಕಿನಲ್ಲಿ ಕಂಡುಬರುವ ಈ ಶಿಲ್ಪದಲ್ಲಿ ಕೃಷ್ಣನು ಗೋವರ್ಧನ ಪರ್ವತವನ್ನು ಎಡಗೈನಲ್ಲಿ ಎತ್ತಿ, ದ್ವಿಭಂಗಿಯಲ್ಲಿ ನಿಂತಿರುವಂತೆ ಶಿಲ್ಪವನ್ನು ಕೆತ್ತಲಾಗಿದ್ದು, ಕೃಷ್ಣನ ಎರಡೂ ಪಾರ್ಶ್ವದಲ್ಲಿ ಗೋವುಗಳ ಶಿಲ್ಪಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ಹಾಗೂ ಇದರ ಮೇಲ್ಭಾಗದಲ್ಲಿ ದ್ರಾವಿಡ ಶಿಖರದ ಮಾದರಿಯು ಕಂಡುಬರುತ್ತದೆ.

**ದಕ್ಷಿಣಾಮೂರ್ತಿ:** ಉತ್ತರ ದಿಕ್ಕಿನಲ್ಲಿ ಕಂಡು ಬರುವ ಈ ಶಿಲ್ಪವು ಎತ್ತರವಾದ ಪಾದುಕೆಗಳು, ನಿಲುವಂಗಿ, ಟೊಪ್ಪಿಯನ್ನು ಧರಿಸಿದ್ದು ಎಡಗೈಯಲ್ಲಿ ಒಂದು ಸುರುಳಿಯನ್ನು ಮತ್ತು ಬಲಗೈಯಲ್ಲಿ ಒಂದು ದಂಡವನ್ನು ಹಿಡಿದಿರುವಂತೆ ಚಿತ್ರಸಲಾಗಿದೆ. ಈ ರೀತಿಯ ಶಿಲ್ಪವು ಕೋರವಂಗಲ ಮತ್ತು ಬೇಲೂರಿನ ದೇವಾಲಯಗಳಲ್ಲಿಯೂ ಕಂಡುಬರುತ್ತದೆ. ಹೊಯ್ಸಳ ದೇವಾಲಯಗಳು ಭಿತ್ತಿಯಲ್ಲಿರುವ ಶಿಲ್ಪ ಸೌಂದರ್ಯದಿಂದ ಎಂತಹವರನ್ನು ಬೆರಗುಗೊಳಿಸುತ್ತದೆ. ಅದರಂತೆಯೇ ಹೊನ್ನಾವರದ ಈ ಕೇಶವ ದೇವಾಲಯವು ಹಲವಾರು ಭಿತ್ತಿ ಶಿಲ್ಪಗಳನ್ನು ಹೊಂದಿದ್ದು, ಇದರಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳೇ ಹೆಚ್ಚಾಗಿ ಕಂಡುಬರುತ್ತವೆ. ಇವುಗಳ ಜೊತೆಗೆ ಚಾಮರಧಾರಿಣಿಯರು, ಪರಿಚಾರಕಿಯರು, ಸಂಗೀತಗಾರರ ಶಿಲ್ಪಗಳು ಕಂಡುಬಂದಿದ್ದು, ಇವು ಭಿತ್ತಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಭಿತ್ತಿಯ ಅನಂತರ ಪ್ರಸ್ತರವು ಕಂಡುಬಂದಿದ್ದು, ಇದರಲ್ಲಿ ಉತ್ತರ, ವಲಭಿ ಮತ್ತು ಕಪೋತ ಭಾಗಗಳಿವೆ. ಈ ದೇವಾಲಯದ ಕಪೋತ ಭಾಗವನ್ನು ಸಂಪೂರ್ಣವಾಗಿ ಹೊಸದಾಗಿ ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಿ ಅಳವಡಿಸಲಾಗಿದೆ. ಹಾಗೂ ಉತ್ತರ ಮತ್ತು ವಲಭೀ ಭಾಗಗಳಲ್ಲೂ ಕೆಲವು ಮಾರ್ಪಾಡುಗಳು ಕಂಡುಬರುತ್ತವೆ. ಅಂದರೆ ಇಲ್ಲಿಯೂ ಕೂಡ ಕೆಲವು ಹೊಸ ಕಲ್ಲುಗಳನ್ನು ಜೋಡಿಸಿದ್ದಾರೆ.

**ಶಿಖರ:** ದೇವಾಲಯವು ದ್ರಾವಿಡ ಮಾದರಿಯ ಶಿಖರವನ್ನು ಹೊಂದಿದ್ದು, ಇದರಲ್ಲಿ ಮೂರು ತಲಗಳು ಕಂಡುಬರುತ್ತವೆ. ಪ್ರತಿ ತಲದ ಮೇಲ್ಭಾಗದಲ್ಲಿ ದಂತ ಪಂಕ್ತಿಗಳು, ಇದರ ಅನಂತರ ಆಲಿಂಗವನ್ನು ನಿರ್ಮಿಸಲಾಗಿದೆ. ಶಿಖರವು ಕೂಟ, ಶಾಲಾ, ಪಂಜರ ಮತ್ತು ನಾಸೀಗಳಿಂದ ಕೂಡಿದ್ದು, ಈ ನಾಸಿಗಳ ಒಳಗೆ ಯಕ್ಷಯಕ್ಷಿಯರ ಶಿಲ್ಪಗಳನ್ನು ನಿರ್ಮಿಸಲಾಗಿದೆ. ಪ್ರತೀ ನಾಸಿಗಳ ಮೇಲ್ಭಾಗದಲ್ಲಿ ಕೀರ್ತಿಮುಖಗಳ ರಚನೆಯಿದೆ. ಭದ್ರನಾಸಿಗಳ ಒಳಗೆ ವಿಷ್ಣುವಿನ ವಿವಿಧ ಶಿಲ್ಪಗಳನ್ನು ಖಂಡರಿಸಲಾಗಿದೆ. ಶಿಖರದ ಮೂರು ತಲಗಳ ಅನಂತರ ಬ್ರಹ್ಮಚ್ಛಂಧ ಮಾದರಿಯ ಅದೋಪದ್ಮವಿದ್ದು ಇದರ ಮೇಲ್ಭಾಗದಲ್ಲಿ ಇತ್ತೀಚಿನ ಲೋಹದ ಕಳಸವನ್ನು ಪ್ರತಿಷ್ಠಾಪಿಸಲಾಗಿದೆ. ಶಿಖರದ ಮುಂಭಾಗದಲ್ಲಿ ಶಾಲಾಕಾರದ ಸುಖನಾಸವಿದ್ದು ಇದರ ಫಲಕದಲ್ಲಿ ಶಿಲ್ಪಗಳು ಕಂಡುಬರುವುದಿಲ್ಲ. ಆದರೆ ಸುಖನಾಸದ ಮೇಲ್ಭಾಗದಲ್ಲಿ ಕೀರ್ತಿಮುಖವಿರುವ ನಾಸಿಯಿದ್ದು, ಇದರೊಳಗೆ ಯೋಗಾನರಸಿಂಹ ಶಿಲ್ಪವಿದೆ.

ಒಟ್ಟಾರೆ ಈ ಹೊನ್ನಾವರ ಗ್ರಾಮದ ಕೇಶವ ದೇವಾಲಯವು ಹೊಯ್ಸಳರ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದ್ದು, ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಧಾರ್ಮಿಕ ಪ್ರಭುತ್ವ ಸಾಧಿಸಿದೆ ಎನ್ನಬಹುದು.

ಇತ್ತೀಚೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು 2018ರಲ್ಲಿ ಜೀರ್ಣೋದ್ಧಾರಮಾಡಿದ್ದಾರೆ.

## ದೇವಾಲಯದ ಛಾಯಾಚಿತ್ರಗಳು



**ದೇವಾಲಯದ ಮುನ್ನೋಟ**



**ಕೇಶವನ ವಿಗ್ರಹ**



**ಸುಕನಾಸಿಯ ಭುವನೇಶ್ವರಿ**



**ಭಿತ್ತಿ ಶಿಲ್ಪಗಳು**



**ದೇವಾಲಯದ ಪಾರ್ಶ್ವನೋಟ**

## ಪರಾಮರ್ಶನ ಗ್ರಂಥಗಳು


1. ಹಾಸನ ಜಿಲ್ಲಾ ಗ್ಯಾಸೆಟಿಯರ್,ಬೆಂಗಳೂರು. 1971
2. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್, 1942
3. ಕನ್ನಡ ವಿಷಯ ವಿಶ್ವಕೋಶ – ಸಂಪುಟ–14, ಪ್ರಸಾರಾಂಗ.ಮೈ.ವಿ.ವಿ.ಮೈಸೂರು.2004
4. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–08, ಪ್ರಸಾರಾಂಗ.ಮೈ.ವಿ.ವಿ.ಮೈಸೂರು.
5. ಶ್ರೀಕಂಠಶಾಸ್ತ್ರಿ. ಎಸ್, ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ.ಮೈ.ವಿ.ವಿ.ಮೈಸೂರು.
6. ಮನೋಜ್.ಜಿ, ದೇವಾಲಯ ವಾಸ್ತು ವಿಜ್ಞಾನ,ಚಿತ್ರದುರ್ಗ.
7. ಡಾಕೆ.ಎಂ.ಎ, ದಿ ಇಂಡಿಯನ್ ಟೆಂಪಲ್ ಫಾರ್ಮ್ಸ್
8. ಉದಯರವಿ, ಹಾಸನ ಜಿಲ್ಲಾ ವೈಶಿಷ್ಟ್ಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಾಸನ
9. ಗೊರೂರು ಅನಂತರಾಜು, ಹಾಸನ ಜಿಲ್ಲೆಯ ದೇವಾಲಯ ದರ್ಶನ, ಹಾಸನ
10. ಗೋಪಾಲ್,ಆರ್– ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.